

ಮೋಹಿನಿ

ಚಿತ್ರ ಕೃಪೆ: 'ರಾಜಾ ರವಿವರ್ಮ: ದಿ ಪೇಂಟರ್ ಪ್ರಿನ್ಸ್' ಕೃತಿ,
ಲೇಖಕ: ಪರ್‌ಶ್ರಾಮ್ ಮಂಗರಾಮ್



ವಿಶ್ವಾಮಿತ್ರ ಮತ್ತು ಮೇನಕಾ



ಗೋಪಿಕಾ ಸ್ತ್ರೀಯರ ಜೊತೆ ಶ್ರೀಕೃಷ್ಣ

ಕರೆಯುತ್ತಿದ್ದಾಳೆ. ಕಿರೀಟಧಾರಿ ಕೃಷ್ಣ ಗೆಜ್ಜೆಯ ನಾದದಿ ಲೋಟವನ್ನು ಹಿಡಿದು ಅಮ್ಮನ ಬೆನ್ನಿಗೆ ನಿಂತು, ಅಮ್ಮ ಚೂರೇ ಚೂರು ಹಾಲಮ್ಮ ಎಂದು ಕೇಳುತ್ತಿದ್ದಂತಿದೆ. ಆಕಳು ಯಾವುದೋ ಲೋಕದ ಧ್ಯಾನದಲ್ಲಿ ಎಲ್ಲರ ಬಯಕೆಯನ್ನು ಪೂರೈಸುವ ಕಾಮಧೇನುವೇ ನಾನು ಎಂಬ ನಿರ್ಲಿಪ್ತಭಾವದಲ್ಲಿ ಮುಗಿಲತ್ತ ಮಾರಿ ಮಾಡಿದೆ. ಪಾಪ ತನ್ನ ಕಂದನನ್ನು ಕನವರಿಸುತ್ತಿದೆಯೋ ಏನೋ. ಪಾಪ ಅದರ ಕಂದಮ್ಮನಿಗೆ ಹಾಲುಣಿಸಬೇಕೆಂಬ ಕೊರಗೂ ಇದೆ. ಈ ಬೆಣ್ಣೆ ಕೃಷ್ಣ ತನ್ನದೇ ದುನಿಯಾ ಎನ್ನುವಂತೆ ಚಿತ್ತಾಕರ್ಷಕ ಸೊಬಗನ್ನು ಇಲ್ಲಿ ಮೂಡಿಸಿದ್ದಾನೆ. ಕೃತಿ ಹರಾಜಿನ ಸಂತೆಯಲ್ಲಿ 80–120 ಕೋಟಿ ರೂಪಾಯಿಯ ಒಳಗೆ ಮಾರಾಟವಾಗಬಹುದು ಎನ್ನುವ ನಿರೀಕ್ಷೆ ಇತ್ತು. ಅವರ ಲೆಕ್ಕಾಚಾರವನ್ನು ಮೀರಿದ ಕೃಷ್ಣನ ಕಥೆ ಬಣ್ಣಿಸಲು ಅಸದಳ. ಭಾರತೀಯ ಮೂಲದ ಪ್ರಸಿದ್ಧ ಅಪ್ರತಿಮ ಕಲಾವಿದ ಎಂ.ಎಫ್. ಹುಸೇನ್ ಅವರ 'ಗ್ರಾಮ ಯಾತ್ರಾ' ಪರಿಕಲ್ಪನೆಯ ಕಲಾಕೃತಿ 2025ರಲ್ಲಿ ಗರಿಷ್ಠ ಬೆಲೆಗೆ ಮಾರಾಟವಾಗಿತ್ತು. ಹುಸೇನ್ ಅವರ ಅಮೂರ್ತ (Abstract) ಆಕೃತಿ 118 ಕೋಟಿ ರೂಪಾಯಿಗೆ ಹರಾಜಾಗಿತ್ತು. ಹಣದ ಮೌಲ್ಯದ ದೃಷ್ಟಿಯಿಂದ ರವಿವರ್ಮ ಅವರ 'ಯಶೋದಾ ಮತ್ತು ಕೃಷ್ಣನ' ಹಿಂದಿನ ಹರಾಜಿನ ಬೆಲೆಯನ್ನು ಮೀರಿದೆ.

ರವಿವರ್ಮ ಅವರ ಕುಟುಂಬವು ತಿರುವಾಂಕೂರಿನ ರಾಜಮನೆತನದ ನಂಟನ್ನು ಹೊಂದಿತ್ತು. ಹಾಗೆಂದು ಅವರೇನು ರಾಜವಂಶಜರಲ್ಲ. 'ಕೈಸರ್ ಐ ಹಿಂದ್' ಪ್ರಶಸ್ತಿಯ ನಂತರ 'ರಾಜ' ಎಂಬ ಪ್ರಯೋಗವೂ ಬಿರುದಾವಳಿಯಂತೆ ಅವರ ಹೆಸರಿನ ಪೂರ್ವಕ್ಕೆ ಸೇರಿದ್ದರಿಂದ ಉತ್ತರೋತ್ತರದಲ್ಲಿ ಅವರ ನಾಮಬಲವನ್ನು ಅದು ವಿಸ್ತರಿಸಿದೆ. ಬಾಲ್ಯದಲ್ಲಿಯೇ ಚಿತ್ರಕಲೆಯ ಮೋಹದ ಬಲೆಗೆ ಸಿಲುಕಿದ್ದ ಅವರು, ಯೌವನದಲ್ಲಿಯೇ ನೈಜ ನೆಲೆಯ ಚಿತ್ರಕಲೆಯಲ್ಲಿ ವಿಶ್ವದ ಗಮನವನ್ನು ಸೆಳೆದರು. ಕೇರಳದ ತಿರುವಾಂಕೂರು ರವಿವರ್ಮರ ಮೂಲ. ಆ ಪ್ರದೇಶ ಬ್ರಿಟಿಷರ ಹಿಡಿತಕ್ಕೆ ಒಳಪಟ್ಟಿತ್ತು. ರಾಜಮನೆತನಕ್ಕೂ ಇವರ ಕುಟುಂಬಕ್ಕೂ ಸಂಬಂಧವಿತ್ತು. ಹಾಗಾಗಿ ರಾಜಕುಟುಂಬದ ಒಡನಾಟವೂ ಸಹಜವಾಗಿ ಸಿಕ್ಕಿತ್ತು. ಆಸ್ಥಾನದ ಚಿತ್ರಕಲಾವಿದರು, ಅಲ್ಲಿಗೆ ಭೇಟಿ ನೀಡುತ್ತಿದ್ದ ಯೂರೋಪಿನ ಚಿತ್ರಕಾರರ ದರ್ಶನ ಆಗಾಗ ಆಗುತ್ತಿತ್ತು. ಬೇರೆ ಬೇರೆ ಕಲಾವಿದರ ನೈಪುಣ್ಯತೆಯನ್ನು ಅರಿಯಲು ರವಿವರ್ಮ ಅವರಿಗೆ ಅದು ಸುವರ್ಣ ಅವಕಾಶವನ್ನು ಕಲ್ಪಿಸಿತು. ಅವರ ಕಲೆಯ ವಿಶೇಷ ಏನೆಂದರೆ ಸಣ್ಣ ಸಣ್ಣ ವಿವರಗಳನ್ನೂ ಸೂಕ್ಷ್ಮವಾಗಿ ನಿರೂಪಿಸಿ ದೃಶ್ಯದ ನೈಜತೆಯನ್ನು ಕಣ್ಣಿಗೆ ಕಟ್ಟಿಕೊಡುತ್ತಾರೆ.

ಈ ಕೃತಿಯನ್ನು ರವಿವರ್ಮ ತಮ್ಮ ಖ್ಯಾತಿಯ ಪರಾಕಾಷ್ಠೆಯಲ್ಲಿದ್ದಾಗ ರಚಿಸಿದ್ದರು. ಇದನ್ನು ಮುಂಬೈ ಮೂಲದ 'ಸ್ಯಾಫ್ರನ್‌ಆರ್ಟ್' (Saffronart) ಸಂಸ್ಥೆ ಹರಾಜು ಪ್ರಕ್ರಿಯೆಯನ್ನು ನಡೆಸಿತ್ತು. 'ಸೀರಮ್ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾ' ಕಂಪನಿಯ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕ ಸೈರಸ್ ಎಸ್. ಪೂನಾವಾಲಾ ಈ ಕಲಾಕೃತಿಯನ್ನು ಖರೀದಿಸಿದ್ದಾರೆ.

ರವಿವರ್ಮ ಏಪ್ರಿಲ್ 29, 1848ರಲ್ಲಿ ಕೇರಳದ ಕಿಲಿಮನೂರ್ ಎಂಬಲ್ಲಿ ಜನಿಸಿದ್ದು, ತಂದೆ: ಎಜುಮಾವಿಲ್ ನೀಲಕಂಠನ್ ಭತ್ತಾಥಿರಿ (ಆಯುರ್ವೇದ ಪಂಡಿತ), ತಾಯಿ: ಉಮಾಂಬ ಬಾಯಿ ಥಂಪುರತ್ತಿ (ಕವಯತ್ರಿ). ತಮ್ಮ ಜೀವಿತಾವಧಿಯಲ್ಲಿಯೇ ಚಿತ್ರಕಲಾ ಲೋಕದ ದಂತಕಥೆಯಂತೆ ಬದುಕಿದ್ದರು. ಈಗಲೂ ಅವರು ಚಿತ್ರಪ್ರೇಮಿಗಳ ಆರಾಧನೆಯ ಕಲಾವಿದ. ತನ್ನದೇ ಆದ 'ಚಿತ್ರ ರಾಜಮಾರ್ಗ'ವನ್ನು ಹಾಕಿದ್ದು ಆಧುನಿಕ ಕಾಲಘಟ್ಟದಲ್ಲೂ ಅನುಕರಣೀಯ ಪ್ರಭಾವಶಾಲಿ ಕಲಾಜ್ಞಾನಿ ಎನ್ನುವಂತೆ ಇವತ್ತಿಗೂ ಜನಜನಿತ. ಮೈಸೂರಿನ ಅರಮನೆಯ ಗೋಡೆಗಳನ್ನು ಅಲಂಕರಿಸಿರುವ ಚಿತ್ರ ವರ್ಣ ವೈಭೋಗಗಳ ಪ್ರತಿ ಚೌಕಟ್ಟಿನ ತುದಿಯಲ್ಲೂ ಒಬ್ಬ ರಾಜನ ಹೆಸರಿದೆ. ಆ ರಾಜನೇ ರಾಜಾ ರವಿವರ್ಮ. ಅವರು ರಾಜಾ ಎಂದು ಕರೆಸಿಕೊಂಡದ್ದು ವೈಸರಾಯ್ ಲಾರ್ಡ್ ಕರ್ಜನ್ ಗೌರವ ಪ್ರದಾನ ಮಾಡಿದ ನಂತರ.